ಭಾಗ್ಯಲಕ್ಷ್ಮಿ ಯೋಜನೆಯ ಅರ್ಹ ಫಲಾನುಭವಿಗಳು

1 (08)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ನೀಡಲಾದ ಬಾಂಡುಗಳೆಷ್ಟು(ವಿವರ ನೀಡುವುದು) ;

ಆ) ಭಾಗ್ಯಲಕ್ಷ್ಮಿ ಯೋಜನೆಯಡಿ ಪ್ರತಿ ವರ್ಷ ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು, ಫಲಾನುಭವಿಗಳನ್ನು ಗುರುತಿಸಲು ಇರುವ ಸರ್ಕಾರದ ಮಾನದಂಡಗಳೇನು? (ವಿವರ ನೀಡುವುದು)

ಶ್ರೀ ಕಳಕಪ್ಪ ಜಿ.ಬಂಡಿ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಬಾಂಡ್ ವಿತರಿಸಿದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಆರ್ಥಿಕ ವರ್ಷ	ವಿತರಿಸಿದ ಬಾಂಡ್‌ಗಳ ಸಂಖ್ಯೆ
1	2009–10	144999
2	2010–11	284764
3	2011–12	254473

ಆ) ಪ್ರತಿ ವರ್ಷ ಗುರುತಿಸಿರುವ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಆರ್ಥಿಕ ವರ್ಷ	ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ
1	2006–07	166728
2	2007–08	123789
3	2008–09	297764

ಕ್ರ.ಸಂ	ಆರ್ಥಿಕ ವರ್ಷ	ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ
4	2009–10	144999
5	2010–11	284764
6	2011–12	254473

ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳು:–

1. ಹೆಣ್ಣು ಮಗು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿರಬೇಕು.
2. ಕುಟುಂಬವು ಕುಟುಂಬದ ಮುಖ್ಯಸ್ಥನ ಭಾವಚಿತ್ರ ಅಥವಾ ಕುಟುಂಬ ಸದಸ್ಯರ ಹೆಸರು ಇರುವ ಬಿಪಿಎಲ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರಬೇಕು.
3. ಮಗುವಿನ ಜನನ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.
4. ಆರೋಗ್ಯ ಇಲಾಖೆಯ ಕಾರ್ಯಕ್ರಮದಂತೆ ರೋಗನಿರೋಧಕ ಚುಚ್ಚುಮದ್ದನ್ನು ಹಾಕಿಸಿರಬೇಕು.
5. ಕುಟುಂಬದ ಎರಡು ಹೆಣ್ಣು ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತಗೊಳಿಸಲಾಗಿದೆ.
6. ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು.